ಹಾಸನದಲ್ಲಿ ರೀಜನಲ್ ವರ್ಕ್‌ಷಾಪ್‌ನ್ನು ಕಟ್ಟಲು, ಭೂಸ್ವಾಧೀನ

2023 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನದಲ್ಲಿ ರೀಜನಲ್ ವರ್ಕ ಷಾಪ್ ಕಟ್ಟುವ ಯೋಜನೆ ಸರ್ಕಾರಕ್ಕೆ ಇದೆಯೇ?

ಆ) ರೀಜನಲ್ ವರ್ಕಷಾಪ್ ಮಾಡುವ ದೃಷ್ಟಿಯಿಂದ ಅಡುವಳ್ಳಿ, ಸತ್ಯಮಂಗಲ ಗ್ರಾಮಗಳಲ್ಲಿ ಭೂಮಿಯನ್ನು ಭೂಸ್ವಾಧೀನ ಮಾಡಿಕೊಂಡಿರುವುದು ನಿಜವಲ್ಲವೆ ಹಾಗಿದ್ದಲ್ಲಿ ಎಷ್ಟು ಎಕರೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ ಅದರ ಬೆಲೆ ಎಷ್ಟು? ಯಾವ ವರ್ಷ ಸ್ವಾಧೀನ ಪಡೆದಿರುತ್ತದೆ?

ಇ) ರೀಜನಲ್ ವರ್ಕಷಾಪ್ ಕಟ್ಟದಿದ್ದರೆ, ಆ ಭೂಮಿಯನ್ನು ಯಾವ ಉಪಯೋಗಕ್ಕಾಗಿ ಬಳಸಿಕೊಳ್ಳಲಾಗುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಪ್ರಾದೇಶಿಕ ಕಾರ್ಯಾಗಾರ ನಿರ್ಮಿಸುವ ಪ್ರಸ್ತಾವನೆ ಇತ್ತು. ನಂತರ ಅದನ್ನು ಕೈಬಿಡಲಾಯಿತು.

ಆ) ಹೌದು, 92.01 ಏಕರೆ ನಿವೇಶನವನ್ನು ಸ್ವಾಧೀನ ಪಡೆಯಲಾಗಿದೆ. ಒಟ್ಟು ಮೌಲ್ಯವು 70,85,507 ರೂಪಾಯಿಗಳು. 1986ನೇ ವರ್ಷದಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ.

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ತರಬೇತಿ ನೀಡುವ ಸಲುವಾಗಿ ಪ್ರಾದೇಶಿಕ ತರಬೇತಿ ಕೇಂದ್ರ ಮತ್ತು ಕೇಂದ್ರ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜಮೀನು ಪರಬಾರೆ ನಿಷೇದ ಕಾಯಿದೆ ಕುರಿತು

2024 - ಶ್ರೀ ಬಿ. ಸೋಮಶೇಖರ (ಮಳವಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ (ಕೆಲವು ಜಮೀನು ಪರಬಾರೆ ನಿಷೇದ) ಕಾಯಿದೆ ಜಾರಿಗೆ ಬಂದಂದಿನಿಂದ ಉಪ ವಿಭಾಗಾಧಿಕಾರಿಗಳ, ಜಿಲ್ಲಾಧಿಕಾರಿಗಳ, ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆ ಎಷ್ಟು?

ಆ) ಅವುಗಳ ಪೈಕಿ ಎಷ್ಟು ಪ್ರಕರಣಗಳನ್ನು ಮೂಲ ಮಂಜೂರುದಾರರು ಅಥವಾ ಅವರ ವಾರಸುದಾರರುಗಳಿಗೆ ಪೋಷಿಸಲಾಗಿದೆ?

ಇ) ಅವರಿಗೆ ಪುನರ್ ಸ್ವಾಧೀನ ಕೊಡದಿರುವುದಕ್ಕೆ ಕಾರಣಗಳೇನು, ಪ್ರಕರಣಗಳನ್ನು ಇತ್ಯರ್ಥಗೊಳಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ)	*ಪ್ರಕರಣಗಳು*	*ಸಂಖ್ಯೆ*	*ವಿಸ್ತೀರ್ಣ ಎಕರೆಗಳಲ್ಲಿ*
	ಪತ್ತೆಹಚ್ಚಿದವುಗಳು	41958	128060-14
	ಪುನರಸ್ಥಾಪಿಸಿದವು	21603	67785-16
	ತಿರಸ್ಕರಿಸಿದವು	16638	46912-38
	ಬಾಕಿ ಉಳಿದಿರುವುವು	3717	13361-17

(ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ).

ಆ) ಪಿ.ಟಿ.ಸಿ.ಎಲ್ ಕಾಯಿದೆ ಅನ್ವಯ ಉಪ ವಿಭಾಗಧಿಕಾರಿಗಳು ಸಂಬಂಧಿಸಿದ ಪಕ್ಷಕಾರರನ್ನು ವಿಚಾರಣೆ ಮಾಡಿ ಅರ್ಹ ಪ್ರಕರಣಗಳಲ್ಲಿ ಪರಬಾರೆ ಮಾಡಿದ ಜಮೀನನ್ನು ಪುನರಸ್ಥಾಪಿಸಿ ಅನರ್ಹ ಪ್ರಕರಣಗಳನ್ನು ತಿರಸ್ಕರಿಸಬೇಕಾಗಿದೆ. ಪತ್ತೆ ಹಚ್ಚಿದ ಒಟ್ಟು 41,958 ಪ್ರಕರಣಗಳ ಪೈಕಿ 38241 ಪ್ರಕರಣಗಳು ತೀರ್ಮಾನವಾಗಿದ್ದು ಅದರಲ್ಲಿ 21603 ಪ್ರಕರಣಗಳಲ್ಲಿ ಸಂಬಂಧಪಟ್ಟವರಿಗೆ ಜಮೀನನ್ನು ಹಿಂತಿರುಗಿಸಿ ಕೊಡಲಾಗಿದೆ. ಇನ್ನು ಕೇವಲ 3717 ಪ್ರಕರಣಗಳು ಮಾತ್ರ ತೀರ್ಮಾನವಾಗಬೇಕಾಗಿರುತ್ತದೆ. ಇದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಇತ್ಯರ್ಥವಾಗಿರುವುದು ತಿಳಿದು ಬರುತ್ತದೆ.

ಸಹಕಾರಿ ಸಂಘಗಳಲ್ಲಿ ಅಭಿವೃದ್ಧಿ

2025 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಸಹಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರಿ ಸಂಘಗಳಲ್ಲಿ ಸರ್ಕಾರದ ಅನುದಾನ ಪಡೆಯದೇ ಇರುವ ಸಂಘಗಳಲ್ಲಿ ಅದರ ಅಭಿವೃದ್ಧಿಗೆ ಸರಕಾರ ಅನುಮತಿ ಪಡದೇ ಮಾಡಲಾಗುವುದೇ?

ಆ) ಸರಕಾರ ಅನುಮತಿ ವಿಷಯದಿಂದ ಅಭಿವೃದ್ಧಿ ಕುಂಠಿತವಾಗುವುದಿಲ್ಲವೆ?

ಇ) ಇದರ ಬಗ್ಗೆ ಸರ್ಕಾರ ಗಂಭೀರ ಆಲೋಚನೆ ಮಾಡುತ್ತಿದೆಯೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ಸಹಕಾರ ಸಂಘಗಳ ಕಾಯಿದೆ ಹಾಗೂ ನಿಯಮಗಳಿಗೊಳಪಟ್ಟು ಇಂತಹ ಸಹಕಾರ ಸಂಘಗಳನ್ನು ಅಭಿವೃದ್ಧಿ ಪಡಿಸಲು ಆಯಾ ಸಹಕಾರ ಸಂಘಗಳ ಮಹಾಸಭೆ ಹಾಗೂ ಆಡಳಿತ ಮಂಡಳಿಗೆ ಸಂಪೂರ್ಣ ಅಧಿಕಾರವಿರುತ್ತದೆ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.